ಈ) ವಿಷಯ :– ಚಿತ್ತಾಪುರ ತಾಲ್ಲೂಕಿನ ಅಕ್ಕಿ ಹಗರಣದ ಬಗ್ಗೆ

ಶ್ರೀ ವಿಶ್ವನಾಥ ಪಾಟೀಲ್ ಹೆಬ್ಬಾಳ್ (ಚಿತ್ತಾಪುರ) :

ಮಾನ್ಯ ಸಭಾಧ್ಯಕ್ಷರೆ, ಚಿತ್ತಾಪುರ ತಾಲ್ಲೂಕಿನಲ್ಲಿ ಮೊನ್ನೆ 20ನೇ ತಾರೀಖು ಎರಡು ಲಾರಿಗಳಲ್ಲಿ ಸುಮಾರು 204 ಕ್ವಿಂಟಲ್ ನಷ್ಟು ಅಕ್ಕಿಯನ್ನು ತೆಗೆದುಕೊಂಡು ಬೇರೆ ರಾಜ್ಯಕ್ಕೆ ಹೋಗುವಾಗ ಪೋಲಿಸರು ಹಿಡಿದು ನಾಲ್ಕು ಜನರನ್ನು ದಸ್ತಗಿರಿ ಮಾಡಿದ್ದಾರೆಂದು ಹೇಳಿದ್ದಾರೆ. ಅದರ ಜೊತೆಗೆ ಈ ಪೂರ್ವದಲ್ಲಿಯೂ ರಾಜ್ಯದಿಂದ ಸಾಕಷ್ಟು ಅಕ್ಕಿ ಮಹಾರಾಷ್ಟ್ರ ಸೇರಿದಂತೆ ಬೇರೆ ರಾಜ್ಯಗಳಿಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡಲಾಗಿದೆ. ಅದರ ಬಗ್ಗೆ ವಿಚಾರಣೆ ಮಾಡಬೇಕಾಗಿತ್ತು. ರಾಜ್ಯದಲ್ಲಿ ಇಷ್ಟೆಲ್ಲಾ ಅಕ್ಕಿ ಹಗರಣದ ಬಗ್ಗೆ ಗುಲ್ಲುಗಳು ನಡೆಯುತ್ತಿದ್ದರೂ ಇಷ್ಟು ಧೈರ್ಯವಾಗಿ ಅಧಿಕಾರಿಗಳು ಮತ್ತೆ ಅಕ್ಕಿಯನ್ನು ಮಾರಾಟ ಮಾಡುವ ಮಟ್ಟಕ್ಕಿದ್ದಾರೆಂದರೆ ಅವರಿಗೆ ಎಷ್ಟು ಧೈರ್ಯವಿದೆ ಎಂಬುದನ್ನು ವಿಚಾರ ಮಾಡಬೇಕಾಗಿದೆ. ಇಂತಹ ಪರಿಸ್ಥಿತಿ ಇದ್ದಾಗ ಈ ಹಿಂದೆಯೂ ಅವ್ಯವಹಾರ, ಕೂಲಿಗಾಗಿ ಕಾಳು ಇರಬಹುದು, ಕೆರೆಗಳ ಹೂಳು ಎತ್ತುವುದಗಿರಬಹುದು, ಬೇರೆ ಬೇರೆ ಕೆಲಸಗಳಿಗೆ ಈ ಅಕ್ಕಿಯನ್ನು ಏನು ಕೊಡಬೇಕಾಗಿತ್ತೋ ಅದಷ್ಟನ್ನು ಪೂರ್ತಿಯಾಗಿ ಚಿತ್ತಾಪುರ ತಾಲ್ಲೂಕಿನಲ್ಲಿ ಅಕ್ಕಿಯನ್ನು ಹಂಚದೆ ಮಹಾರಾಷ್ಟ್ರಕ್ಕೆ ತೆಗೆದುಕೊಂಡು ಹೋಗಿ ಮಾರಾಟ ಮಾಡಿದ್ದಾರೆ. ಹಾಗೂ ಆ ಅಕ್ಕಿಯಿಂದ ಬಂದ ಹಣವನ್ನು ಕೂಡ ಎಲ್ಲಿಯೂ ಖರ್ಚು ಮಾಡಲಾರದೆ, ಅಧಿಕಾರಿಗಳು ಮತ್ತು ಕೆಲವು ಮಧ್ಯವರ್ತಿಗಳು ಹಣ ಹಂಚಿಕೊಡಿದ್ದಾರೆ. ಇದನ್ನು ತಾವು ಬೇಕಾದರೆ ವಿಚಾರಣೆ ಮಾಡಿದರೆ ಗೊತ್ತಾಗುತ್ತದೆ. ಈಗಾಗಲೇ ಈ ಅವ್ಯವಹಾರದ ಬಗ್ಗೆ ಬೇರೆ ಕಡೆಗಳಲ್ಲಿ ಸಿಓಡಿಗೆ ವಹಿಸಿಕೊಡಲಾಗಿದೆ. ಈ ಚಿತ್ತಾಪುರದಲ್ಲಿ ನಡೆದ ಅವ್ಯವಹಾರದ ಬಗ್ಗೆಯೂ ಕೂಡಾ ತನಿಖೆ ಮಾಡಲು ಸಿಓಡಿಗೆ ಒಪ್ಪಿಸಿದರೆ ಒಳ್ಳೆಯದಾಗುತ್ತದೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ. ಇವತ್ತು ಸೂರ್ಯ ಮೂರ್ವದಲ್ಲಿ ಹುಟ್ಟುವುದು ಎಷ್ಟು ಸತ್ಯವೋ ಅಷ್ಟೇ ಇವತ್ತು ಚಿತ್ತಾಪೂರದಲ್ಲಿ 100ಕ್ಕೆ 100 ರಷ್ಟು ಅಕ್ಕಿ ಹೊರಗಿನ ರಾಜ್ಯಗಳಿಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡಿರುವುದು ಸತ್ಯವಾಗಿರುತ್ತದೆ. ಇವತ್ತು ಬಡ ಕೂಲಿಕಾರನ ಗಡಿಗೆಯಲ್ಲಿ ಒಂದೂ ಕಾಳು ಅಕ್ಕಿಯೂ ಕುದ್ದಿಲ್ಲವೆಂದು ನಾನು ಹೇಳಬೇಕಾಗತ್ತದೆ. ಇಂತಹ ಪರಿಸ್ಥಿತಿ ಇದ್ದಾಗ ಈ ಏನು ಅವ್ಯವಹಾರವಿದೆ, ಇದರ ಬಗ್ಗೆ ಸಂಪೂರ್ಣವಾದ ಒಂದು ವಿಚಾರಣೆಯಾಗಬೇಕಾಗಿದೆ. ಈ ಯೋಜನೆಯಲ್ಲಿ ಒಂದೂ ಅಭಿವೃದ್ಧಿ ಕೆಲಸವೂ ಆಗಿಲ್ಲ. ಚಿತ್ತಾಪೂರದಲ್ಲಿ ಜಂಗಲ್ ಲಾ, (ಲಾ–ಲೆಸನೆಸ್) ಬೆಳೆದಿದೆ. ಅಲ್ಲಿ ಅಧಿಕಾರಿಗಳು ಯಾರೂ ಕೂಡಾ ಇರುವುದಿಲ್ಲ. ಹೀಗಾಗಿ ಇವತ್ತೇನು ಅವ್ಯವಹಾರವಾಗಿದೆ ಅದು ಹೂಳು ಎತ್ತುವುದಾಗಿರಬಹುದು, ಕೂಲಿಗಾಗಿ ಕಾಳು ಯೋಜನೆ ಆಗಿರಬಹುದು ಬೇರೆ ಯಾವುದೇ ಯೋಜನೆಯಲ್ಲಿ ತೆಗೆದುಕೊಂಡಂತಹ ಅಕ್ಕಿ ಏನು ಮಾರಾಟವಾಗಿದೆ, ಅದರ ಹಣ ಪೂರ್ತಿಯಾಗಿ ಏನು ಲೂಟಿಯಾಗಿದೆ ಅದರ ಬಗ್ಗೆ ಇದನ್ನು ಸಿಓಡಿ ತನಿಖೆಗೆ ಒಪ್ಪಿಸಿ ಈ ಬಗ್ಗೆ ನಿಷ್ಪಕ್ಷಪಾತವಾದ ತನಿಖೆಯಾಗಬೇಕೆಂದು ನಾನು ಸನ್ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅಷ್ಟೇ ಅಲ್ಲ. ಇವತ್ತು ಯಾರು ತಪ್ಪಿತಸ್ಥರಿದ್ದಾರೆ ಅವರ ಮೇಲೆ ಉಗ್ರವಾದ ಕ್ರಮ ತೆಗೆದುಕೊಂಡು ಮುಂದೆ ಇಂತಹ ಅವ್ಯವಹಾರ ನಡೆಯದಂತೆ ಸರ್ಕಾರ ನೋಡಿಕೊಳ್ಳಬೇಕಾಗುತ್ತದೆ. ನಾನು ಈ ಸಂಬಂಧ ಕೆಲವು ಸಲಹೆಗಳನ್ನು ಹೇಳಬಯಸುತ್ತೇನೆ. ಇವತ್ತು ಈ ಕೂಲಿಗಾಗಿ ಕಾಳು ಯೋಜನೆಯಲ್ಲಿ ಏನು ಅಕ್ಕಿಯನ್ನು ಗುಲಬರ್ಗಾದಲ್ಲಿ ಕೊಡಲಾಗುತ್ತಿದೆ. ನಮ್ಮ ಭಾಗದಲ್ಲಿ ಅಕ್ಕಿ ಊಟ ಮಾಡುವಂತಹ ಜನ ಹೆಚ್ಚು

ಇರುವುದಿಲ್ಲ. ನಮ್ಮಲ್ಲಿ ಜೋಳವನ್ನು ಊಟ ಮಾಡುತ್ತೇವೆ. ಹಾಗಾಗಿ ಅದಕ್ಕೆ ಒಂದು ಪರ್ಯಾಯವಾದ ವ್ಯವಸ್ಥೆ ನಾವು ಮಾಡುವವರೆಗೆ ಇವತ್ತು ಈ ಕೂಲಿಗಾಗಿ ಕಾಳು ಯೋಜನೆ ಅಡಿಯಲ್ಲಿ ಅಕ್ಕಿ ಏನು ಕೊಡುತ್ತೇವೆಯೋ ಅದರ ಪ್ರಯೋಜ ಆಗುವುದಿಲ್ಲ. ಯಾವ ಕೂಲಿಕಾರರೂ ಮುಂದೆ ಬಂದು ಅಕ್ಕಿಯನ್ನು ತೆಗೆದುಕೊಳ್ಳುವಂತಹ ಪರಿಸ್ಥಿತಿ ಇರುವುದಿಲ್ಲ. ಅದಕ್ಕೆ ಸರ್ಕಾರವೇ ಇದನ್ನು ನೇರವಾಗಿ ಮಾರುಕಟ್ಟೆಯಲ್ಲಿ ಮಾರಾಟ ಮಾಡಿ ಆ ಹಣವನ್ನು ತಾವು ಕೆಲಸಕ್ಕಾಗಿ ಕೊಟ್ಟಿದ್ದಾದರೆ ಇವತ್ತು ಕೆಲಸಗಳಾಗುತ್ತೆ, ಈ ರಾಜ್ಯಕ್ಕೆ ಅಸೆಟ್ ಕ್ರಿಯೇಟ್ ಆಗುತ್ತದೆ. ಇವತ್ತು ಅಕ್ಕಿಯನ್ನು ಮಹಾರಾಷ್ಟ್ರ ಸೇರಿದಂತೆ ಬೇರೆ ರಾಜ್ಯಗಳಿಗೆ ಮಾರಾಟ ಮಾಡಿ ಬಂದಂತಹ ಹಣ ಅಧಿಕಾರಿಗಳ, ಮಧ್ಯವರ್ತಿಗಳ ಹಾಗೂ ರಾಜಕಾರಣಿಗಳ ಕಿಸೆಗೆ ಸೇರಿಕೊಂಡಿದೆ ಮುಂದೆಯೂ ಕೂಡ ಇದು ಮುಂದುವರೆಯುತ್ತದೆ. ಅದಕ್ಕೆ ನೀವು ಏನಾದರೂ ಒಂದು ವ್ಯವಸ್ಥೆ ಮಾಡಿ, ಈ ಅಕ್ಕಿಯ ಬದಲಿಗೆ ಕೂಲಿಯನ್ನು ಪೂರ್ತಿ ಕೊಡುವುದರ ಮೂಲಕ ಇವತ್ತು ಕೆಲಸವನ್ನು ತೆಗೆದುಕೊಂಡರೆ, ಈ ರಾಜ್ಯದಲ್ಲಿ ಒಂದು ಅಸೆಟ್ ಕ್ರಿಯೇಟ್ ಮಾಡಲು ಸಾಧ್ಯವಾಗುತ್ತದೆ; ಖರ್ಗೆಜಿ ಯವರು ತಮ್ಮ ಅಭಿಪ್ರಾಯದಲ್ಲಿ ಹೇಳಿದ್ದನ್ನು ನಾವು ಬೆಂಬಲಿಸಬೇಕಾಗುತ್ತದೆ. ಅವರು ಹೇಳುತ್ತಿದ್ದರು, ಕೆಲವೊಂದು ಸಮಸ್ಯೆಗಳು ವಿಶೇಷವಾಗಿ ಗುಲಬರ್ಗಾ ಜಿಲ್ಲೆಯಲ್ಲಿ ಅಕ್ಕಿ ಊಟ ಮಾಡುವಂತಹ ಜನರೇ ಸಿಗುವುದಿಲ್ಲ, ಅಂತಹ ಪರಿಸ್ಥಿತಿಯಲ್ಲಿ ಕೂಲಿ ಮಾಡತಕ್ಕಂಥ ಜನ ಅಕ್ಕಿಯನ್ನು ತೆಗೆದುಕೊಂಡು ಬಳಸುವುದಕ್ಕಾಗುವುದಿಲ್ಲ. ಅದಕ್ಕೆ ಸರ್ಕಾರವೇ ಇದಕ್ಕೆ ಒಂದು ಪರ್ಯಾಯವಾದ ವ್ಯವಸ್ಥೆಯನ್ನು ಮಾಡಬೇಕು ಇದರ ಬಗ್ಗೆ ನಮ್ಮ ಮಾನ್ಯ ನಾಯಕರು ತಿಳಿಸಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಮತ್ತು ಈ ಅವ್ಯವಹಾರವನ್ನು ಸಂಪೂರ್ಣವಾಗಿ ಸಿಓಡಿ ತನಿಖೆಗೆ ಒಪ್ಪಿಸಬೇಕೆಂದು ಕೂಡ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಚಿತ್ತಾಪುರ ಕ್ಷೇತ್ರದ ಮಳಖೇಡದಲ್ಲಿ ದಿನಾಂಕ: 20–7–2004 ರಂದು 204 ಕ್ವಿಂಟಲ್ ಅಕ್ಕಿಯನ್ನು ಲಾರಿಯಲ್ಲಿ ಕಳ್ಳಸಾಗಾಣಿಕೆ ಮಾಡುವ ಬಗ್ಗೆ ಪೋಲೀಸ್ ಇಲಾಖೆಯು ಜಪ್ತಿ ಮಾಡಿ ಪ್ರಕರಣವನ್ನು ದಾಖಲಿಸಿ ಇದಕ್ಕೆ ಸಂಬಂಧಿಸಿದ ನಾಲ್ಕು ಜನರನ್ನು ದಸ್ತಗಿರಿ ಮಾಡಲಾಗಿದ್ದು ಪ್ರಕರಣವು ವಿಚಾರಣೆಯಲ್ಲಿದೆ. ಅವರು ಸೂರ್ಯ ಹುಟ್ಟುವುದು ಎಷ್ಟು ಸತ್ಯವೆಂದು ಹೇಳಿದರು. ಸೂರ್ಯ ಹುಟ್ಟುವುದೂ ಇಲ್ಲ, ಸಾಯುವುದೂ ಇಲ್ಲ. ಮುಳುಗುವುದೂ ಇಲ್ಲ. ಆದರೆ ಅದು ಏನೇ ಇರಲಿ, ಅದು ವಾಡಿಕೆಯ ಒಂದು ಗಾದೆ ಮಾತು, ಅವರು ಹೇಳಿದಂತೆ ಆ ಬಗ್ಗೆ ಸಿಓಡಿ ತನಿಖೆಯಾಗಬೇಕೆನ್ನುವುದಾದರೆ ಅದನ್ನೂ ಕೂಡ ನಾವು ಪರಿಶೀಲನೆ ಮಾಡುತ್ತೇವೆ. ಈ ಮಾಲು ಮಹಾರಾಷ್ಟ್ರದ ಕಡೆಗೆ ಹೋಗಿದೆ ಎಂದೂ ಕೂಡ ತಾವು ಅಪಾಧಿಸಿದ್ದೀರಿ, ಆ ಬಗ್ಗೆ ಶೂನ್ಯ ವೇಳೆಯಲ್ಲಿ ನಾವು ಚರ್ಚೆ ಮಾಡಲಾಗುವುದಿಲ್ಲ. ಅದನ್ನು ಬೇರೆ ರೂಪದಲ್ಲಿ ತರಬಹುದು, ಆಯವ್ಯಯದ ಚರ್ಚೆಯ ಸಂದರ್ಭದಲ್ಲೂ ಕೂಡ ತಾವು ಮಾತನಾಡುವುದಕ್ಕೆ ಅವಕಾಶವಿದೆ. ಸರ್ಕಾರ ಇದೊಂದು ಗಂಭೀರವಾದ ವಿಷಯವೆಂದು ಪರಿಗಣಿಸಿ ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತದೆ.